ದಿಃ30.07.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ. ಎಂ.ಎಂ., ವಕೀಲರಿಂದಃ

1. ನಾನು ಅಂಗಡಿ ಮತ್ತು ವ್ಯವಸಾಯ ಮಾಡುತ್ತೇನೆ.

2. ಚಾಸಾ.9 ನನ್ನ ಹೆಂಡತಿ.

3. ಚಾಸಾ.16 ನನ್ನ ಸಹೋದರಿ.

4. ಚಾಸಾ.17 ನನ್ನ ಅಣ್ಣನ ಮಗ.

5. 1 ನೇ ಆರೋಪಿತನ ಮನೆ ನನ್ನ ಮನೆಯ ಎದುರಿಗೆ ಇರುತ್ತದೆ ಎನ್ನುವುದು ಸರಿ.

6. 2 ನೇ ಆರೋಪಿ ನಜೀಂ ತಾಜ್ ಇವರ ಮನೆ ಬೆಂಗಳೂರಿನಲ್ಲಿ ಇದ್ದುದ್ದರಿಂದ ನನಗೆ ಅವಳ ಪರಿಚಯವಿರುವುದಿಲ್ಲ ಎನ್ನುವುದು ಸರಿ

7. 3 ನೇ ಆರೋಪಿತಳಾದ ರಶೀದ್ ಉನ್ನೀಸಾ 1 ನೇ ಆರೋಪಿತನ ಸಹೋದರಿಯಾಗಿದ್ದು, 18 ವರ್ಷಗಳ ಹಿಂದೆ ವಿವಾಹವಾಗಿ ಮೈಸೂರಿನಲ್ಲಿ ವಾಸ ಮಾಡುತ್ತಿದ್ದಾಳೆ ಎನ್ನುವುದು ಸರಿ.

8. 4 ನೇ ಆರೋಪಿ ಮೊಹಮ್ಮದ್ ರಫಿ ತುಮಾಕೂರಿನಲ್ಲಿ ವಾಸವಾಗಿದ್ದನು ಎನ್ನುವುದು ಸರಿ.

9. ನನ್ನ ಮಗಳಾದ ಆಯೀಷಾ ಮಾಗಡಿಯಲ್ಲಿನ ಕಲ್ಯಾ ಗೇಟ್‌ನ ಹಿಂದೆ ವಿನ್ನರ್ ಶಾಲೆಯಲ್ಲಿ ಓದುತ್ತಿದ್ದಳು.

10. ಸದರಿ ಶಾಲೆ ನಮ್ಮ ಮನೆಯಿಂದ ಸುಮಾರು ಅರ್ಧ ಕಿಮೀ ಅಂತರದಲ್ಲಿದ್ದು, ಕೆಲವು ಸಲ ಅವಳೇ ನಡೆದುಕೊಂಡು ಹೋಗುತ್ತಿದ್ದಳು, ಮತ್ತೆ ಕೆಲವೊಂದು ಸಲ ಅವಳನ್ನು ವಾಹನದ ಮೇಲೆ ಕೂಡಿಸಿಕೊಂಡು ನಾನು ಮತ್ತು ನನ್ನ ಮಗ ಒಯ್ದು ಬಿಟ್ಟು ಬರುತ್ತಿದ್ದೆವು.

11. ಸದರಿ ನನ್ನ ಮಗಳು ಅರೇಬಿಕ್ ಶಾಲೆಯಲ್ಲಿ ಧಾರ್ಮಿಕ ಅಧ್ಯಯನವನ್ನು ಮಾಡಲು ಪ್ರತಿದಿನ ಸಾಯಂಕಾಲ 6.00 ರಿಂದ 7.30 ರವರೆಗೆ ಹೋಗುತ್ತಿದ್ದಳು.

12. ಅವಳು ತಮ್ಮ ಶಾಲೆಯಿಂದ ಸಾಯಂಕಾಲ 6.00 ಗಂಟೆಗೆ ಮನೆಗೆ ಬಂದು ಬಟ್ಟೆ ಬದಲಿಸಿಕೊಂಡು ನಂತರ ಅರೇಬಿಕ್ ಶಾಲೆಗೆ ಹೋಗುತ್ತಿದ್ದಳು.

13. 1 ನೇ ಆರೋಪಿ ಮೊದಲಿನಿಂದಲೂ ನನ್ನೊಂದಿಗೆ ಚೆನ್ನಾಗಿ ಅನ್ಯೋನ್ಯವಾಗಿ ಇರುತ್ತಿದ್ದನು ಎನ್ನುವುದು ಸರಿ.

14. ನಮ್ಮ ಮನೆಗೆ ಉತ್ತರ ಮತ್ತು ದಕ್ಷಿಣಕ್ಕೆ ಬಾಗಿಲುಗಳಿದ್ದು, ದಕ್ಷಿಣದ ಬಾಗಿಲಿನ ಎದುರಿಗೆ 1 ನೇ ಆರೋಪಿತನ ಮನೆ ಇರುತ್ತದೆ ಎನ್ನುವುದು ಸರಿ.

15. ದಕ್ಷಿಣದ ನಮ್ಮ ಮನೆಯ ಬಾಗಿಲಿನಿಂದ 3 ಮನೆ ದಾಟಿ ನಮ್ಮ ಅಂಗಡಿ ಇರುತ್ತದೆ.

16. ನಮ್ಮ ಮನೆಯ ಉತ್ತರದ ಕಡೆಯಿಂದಲೂ ಸಹ 3 ಮನೆ ದಾಟಿದ ನಂತರ ಸದರಿ ನಮ್ಮ ಅಂಗಡಿಯು ಇರುತ್ತದೆ.

17. ನಮ್ಮ ಮನೆಯಿಂದ ದಕ್ಷಿಣವಾಗಲೀ ಅಥವಾ ಉತ್ತರದ ಬಾಗಿಲಿನಿಂದ ಹೋದರೆ ಸದರಿ ನಮ್ಮ ಅಂಗಡಿಯನ್ನು ನೋಡಬಹುದು.

18. ಸದರಿ ಅಂಗಡಿಯು ಕಳೆದ 8 ವರ್ಷಗಳಿಂದ ನಡೆಸುತ್ತಿದ್ದೇವೆ.

19. ನಮ್ಮ ಅಂಗಡಿಯ ಸುತ್ತಮುತ್ತಲೂ ಸಾಕಷ್ಟು ವಾಸದ ಮನೆಗಳು ಇರುವುದರಿಂದ ಸಾಕಷ್ಟು ಜನ ಇರುತ್ತಾರೆ ಎನ್ನುವುದು ಸರಿ.

20. ನಮ್ಮ ಅಂಗಡಿಯ ಹತ್ತಿರ ಯಾರೇ ಬಂದರೂ ಸುತ್ತಮುತ್ತಲೂ ಇರುವ ವಾಸಿಗರು ನೋಡಬಹುದು.

21. ನಮ್ಮ ಅಂಗಡಿಯ ಎದುರಿಗೆ ವಾಸು ಎಂಬುವವರ ಒಂದು ಸಿಲ್ಕ್ ಫ್ಯಾಕ್ಟರಿ ಇರುತ್ತದೆ ಎನ್ನುವುದು ಸರಿ.

22. ದಿಃ01.03.2017 ರಂದು ರಾತ್ರಿ ಸುಮಾರು 10.45-11.00 ಗಂಟೆ ಸಮಯದಲ್ಲಿ ಮಸೀದಿಗೆ ಹೋಗಿ ಮೌಲ್ವಿ

ಇವರಿಗೆ ತಿಳಿಸಿ, ಧ್ವನಿವರ್ಧಕದಲ್ಲಿ ನನ್ನ ಮಗಳಾದ ಆಯೀಷಾ ಕಾಣೆಯಾಗಿದ್ದಾಳೆ ಎಂದು ಪ್ರಚರಿಸಿರುತ್ತೇನೆ ಎನ್ನುವುದು ಸರಿ.

23. ಯಾರೇ ಕಾಲವಾದರೂ ಅಥವಾ ಕಳೆದುಹೋದರೂ ಅಥವಾ ವಸ್ತು ಸಿಕ್ಕಿದರೂ ಮೊದಲಿಗೆ ಮಸೀದಿಗೆ ಹೋಗಿ ಧ್ವನಿವರ್ಧಕದಲ್ಲಿ ಪ್ರಚರಿಸುತ್ತೇವೆ ಎನ್ನುವುದು ಸರಿ.

24. ಅದೇ ದಿನ ರಾತ್ರಿ ನಾವು ಊರ ತುಂಬೆಲ್ಲಾ ನನ್ನ ಮಗಳಾದ ಆಯೀಷಾ ಇವಳನ್ನು ಹುಡುಕುವಾಗ 1ನೇ ಆರೋಪಿತನೂ ಸಹ ನಮ್ಮೊಂದಿಗೆ ಹುಡುಕಲು ಬಂದಿದ್ದನು ಎಂದರೆ, ಆತನು ನಮ್ಮ ಮನೆಯ ಬಳಿ ಮಾತ್ರ ಬಂದು ಮಾತನಾಡಿಸಿ ಹೋಗಿದ್ದು ನಮ್ಮ ಜೊತೆಗೆ ಹುಡುಕಲು ಬಂದಿರಲಿಲ್ಲ ಎಂದು ಹೇಳುತ್ತೇನೆ.

25. ಆದಿನ ರಾತ್ರಿ ನಾವು 1.00-2.00 ಗಂಟೆವರೆಗೆ ಸುಮಾರು 8-10 ಜನ ಸೇರಿ ಹುಡುಕಿರುತ್ತೇವೆ.

26. ಸದರಿ 8-10 ಜನರ ಹೆಸರು ಮತ್ತು ಹುಡುಕಾಟ ಮಾಡಿದ ಯಾವ್ಯಾವ ಮಾಗಡಿ ಊರಿನ ವಿವಿಧ ಪ್ರದೇಶಗಳ ಹೆಸರುಗಳನ್ನು ಹೇಳಲು ಆಗುವುದಿಲ್ಲ.

27. ಹೊಸಹಳ್ಳಿ ರೋಡ್‌ನಲ್ಲಿರುವ ನಮ್ಮ ಜಮೀನಿನ ಕಡೆಗೂ ಸಹ ಹುಡುಕಾಟ ಮಾಡಿರುತ್ತೇವೆ.

28. ಹೊಸಹಳ್ಳಿ ಕಡೆಗೆ ಹೋಗುವ ರಸ್ತೆಯ ಎಡಭಾಗದಲ್ಲಿ ಅಂದರೆ ಪಶ್ಚಿಮ ದಿಕ್ಕಿನಲ್ಲಿ ಒಂದು ಎಕರೆ ಖಾಲಿ ಜಾಗ ಇದ್ದು, ಅದು ಕಾಣುತ್ತದೆ ಎನ್ನುವುದು ಸರಿ.

29. ದಿ:01.03.2017 ರಂದು ಮಧ್ಯರಾತ್ರಿ 1.00 ಗಂಟೆ ಸಮಯದಲ್ಲಿ ನಾವು ಪೊಲೀಸ್ ಠಾಣೆಗೆ ಹೋಗಿದ್ದೆವು.

30. ಆ ಸಮಯದಲ್ಲಿ ಪಿರ್ಯಾದನ್ನು ಕೊಡಲು ಪ್ರಯತ್ನಿಸಿದಾಗ ಪೊಲೀಸರು ಅದನ್ನು ಪಡೆಯದೇ ಅಲ್ಲಿಯೇ ಹುಡುಕಾಟ ನಡೆಸಲು ತಿಳಿಸಿರುತ್ತಾರೆ.

31. ಆ ಸಮಯದಲ್ಲಿ 1ನೇ ಆರೋಪಿ ನಮ್ಮೊಂದಿಗೆ ಇದ್ದು, ಆಗಿನ ನಮ್ಮ ಏರಿಯಾದ ಕೌನ್ಸಿಲರ್ ರಿಯಾಜ್ ಈತನಿಗೆ ಫೋನ್ ಮಾಡಿ, ಪೊಲೀಸರು ಪಿರ್ಯಾದನ್ನು ಸ್ವೀಕರಿಸುತ್ತಿಲ್ಲವೆಂದು ಹೇಳಿದ್ದಕ್ಕೆ, ಸದರಿ ಕೌನ್ಸಿಲರ್ ರಿಯಾಜ್ ಈತನು ಪೊಲೀಸರಿಗೆ ಫೋನ್ ಮಾಡಿ, ನಮ್ಮ ಪಿರ್ಯಾದನ್ನು ಸ್ವೀಕರಿಸಲು ತಿಳಿಸಿರುತ್ತಾನೆ ಎಂಬುದು ನನಗೆ ಗೊತ್ತಿಲ್ಲ.

32. ದಿ:02.03.2017 ರಂದು ಪೊಲೀಸರಲ್ಲಿ ಪಿರ್ಯಾದನ್ನು ಬೆಳಿಗ್ಗೆ 9.00 ಗಂಟೆಗೆ ಕೊಡುವುದಕ್ಕೆ ಮುಂಚೆಯೂ ಸಹ ಊರಲ್ಲಿ ಎಲ್ಲ ಕಡೆಗೆ ಕಾಣೆಯಾಗಿದ್ದ ನನ್ನ ಮಗಳು ಆಯೀಷಾ ಇವಳನ್ನು ಹುಡುಕಿರುತ್ತೇವೆ ಎನ್ನುವುದು ಸರಿ.

33. ಪಿರ್ಯಾದನ್ನು ಸಲ್ಲಿಸಿದ ನಂತರ ಪೊಲೀಸರು ನಮ್ಮೊಂದಿಗೆ ಬಂದು ಎಲ್ಲ ಕಡೆಗೆ ಹುಡುಕಾಟ ನಡೆಸಿರುತ್ತಾರೆ ಎನ್ನುವುದು ಸರಿ.

34. ನಮ್ಮ ಮನೆಯ ಸುತ್ತಮುತ್ತಲೂ ಪೊಲೀಸರು ಹುಡುಕಾಟ ಮಾಡಿದ್ದನ್ನು ಹೊರತುಪಡಿಸಿ, ಹೊಸಹಳ್ಳಿ ರಸ್ತೆಯಾಗಲೀ ಅಥವಾ ಸದರಿ ರಸ್ತೆಯ ಎಡಭಾಗದಲ್ಲಿ ಅಂದರೆ ಪಶ್ಚಿಮಕ್ಕೆ ಇದ್ದ ಒಂದು ಎಕರೆ ಜಾಗದಲ್ಲಿ ಹುಡುಕಾಟ ನಡೆಸಿರುವುದಿಲ್ಲ.

35. ನಮ್ಮ ಅಂಗಡಿಯಿಂದ ಕಲ್ಯಾ ಗೇಟ್ ಮತ್ತು ಅಲ್ಲಿಂದ ಕುಣಿಗಲ್ ರೋಡ್‌ನಲ್ಲಿ ಸುಮಾರು 500-600 ಅಡಿಯಷ್ಟು ಹೋಗಿ ಬಲಕ್ಕೆ ತಿರುಗಿ ನಮ್ಮ ಜಮೀನಿಗೆ ಮತ್ತು ಹೊಸಹಳ್ಳಿ ಕಡೆಗೆ ಹೋಗುವ ರಸ್ತೆಯಲ್ಲಿ ಸಾಕಷ್ಟು ಅಂಗಡಿ ಮುಂಗಟ್ಟುಗಳು ಇರುವುದರಿಂದ ಅಲ್ಲಿ ಸಾಕಷ್ಟು ಜನಸಂಖ್ಯೆ ಇರುತ್ತದೆ ಎನ್ನುವುದು ಸರಿ.

36. ಸದರಿ ತಿರುವಿನ ನಂತರ ಸುಮಾರು 100 ಅಡಿಗಳ ಮೇಲೆ ರಸ್ತೆಯ ಎಡಕ್ಕೆ 1ನೇ ಆರೋಪಿತನ ಒಂದು ಎಕರೆ ಜಾಗ (ಆಸ್ಥಾನ) ಇರುತ್ತದೆ ಎನ್ನುವುದು ಸರಿ.

37. ಸದರಿ ಬಲಕ್ಕೆ ತಿರುವಿನ ನಂತರ ಹೊಸಹಳ್ಳಿ ರಸ್ತೆಯ ಎರಡೂ ಬದಿಗೆ ವಾಸದ ಮನೆಗಳು ಇರುತ್ತವೆ ಎನ್ನುವುದು ಸರಿ.

38. ಸದರಿ ಆಸ್ಥಾನದ ದಕ್ಷಿಣದ ಕಡೆಗೆ 2-3 ಸೈಟ್ ಬಿಟ್ಟು ವಾಸದ ಮನೆಗಳು ಇರುತ್ತವೆ.

39. ಸದರಿ ಮನೆಗಳ ಹತ್ತಿರ ನಿಂತು ನೋಡಿದಲ್ಲಿ ಸದರಿ ಆಸ್ಥಾನದಲ್ಲಿ ಏನೇನು ನಡೆಯುತ್ತದೆ ಎಂಬುದು ಕಾಣುತ್ತದೆ ಎನ್ನುವುದು ಸರಿ.

40. ಸದರಿ ಆಸ್ಥಾನದಲ್ಲಿ ಒಂದು ಶೀಟಿನ ಶೆಡ್ ಹಾಕಿದ್ದು, ಅದರಲ್ಲಿ ಪೀಠ ಇದ್ದು, ಅದರ ಪಕ್ಕದಲ್ಲಿ ಸ್ನಾನ ಮಾಡಲೆಂದು ಕಲ್ಲು, ಹಾಗೂ ಒಂದು ನೀರಿನ ಟ್ಯಾಂಕ್ ಇದ್ದು, ಮಿಕ್ಕಿದ್ದು ಖಾಲಿ ಜಾಗ ಇರುತ್ತದೆ ಎನ್ನುವುದು ಸರಿ.

41. ನನ್ನ ಇಡೀ ಜೀವನದಲ್ಲಿ ಸದರಿ ಆಸ್ಥಾನಕ್ಕೆ ಸುಮಾರು 2-3 ಬಾರಿ ಮಾತ್ರ ಭೇಟಿ ನೀಡಿರುತ್ತೇನೆ.

42. ನಾವು ಹೊಸಹಳ್ಳಿ ಗ್ರಾಮದಲ್ಲಿ ಹುಡುಕುತ್ತಿದ್ದುದ್ದರಿಂದ, ನಂತರ ಶುಕ್ರವಾರ ದಿವಸ ನಮಾಜ್ ಮಾಡಿದ ನಂತರ ದನ ಕಾಯುವವರು ಅಲ್ಲಿಗೆ ಬಂದು ಸದರಿ ಆಸ್ಥಾನದ ಪಶ್ಚಿಮ ದಿಕ್ಕಿನಲ್ಲಿ ಸುಮಾರು 3 ಮಾರುಗಳ ಅಂತರದಲ್ಲಿ ನೀರಿನ ಕಾಲುವೆಯಲ್ಲಿ ಒಂದು ಶವ ಬಿದ್ದಿದೆ ಎಂದು ತಿಳಿಸಿರುತ್ತಾರೆ.

43. ಆಗ ಸಮಯ ಮಧ್ಯಾಹ್ನ 3.15 ಗಂಟೆ ಆಗಿತ್ತು.

44. ತಕ್ಷಣ ನಾನು ಒಬ್ಬನೇ ಆ ಸ್ಥಳಕ್ಕೆ ಹೋಗಿರುತ್ತೇನೆ, ನಂತರ ಸಾಕಷ್ಟು ಜನ ಕೂಡಿದ್ದರು.

45. ನಾನು 10ನೇ ತರಗತಿವರೆಗೆ ಆಂಗ್ಲ ಭಾಷೆಯಲ್ಲಿ ಓದಿದ್ದು, ನನಗೆ ಕನ್ನಡ ಭಾಷೆ ಓದಲು ಬರುತ್ತದೆ.

46. ಆ ಸಮಯದಲ್ಲಿ ತಕ್ಷಣ ನಾನು ಪೊಲೀಸರಿಗೆ ತಿಳಿಸಲು ಆ ಆಘಾತದಲ್ಲಿ ಆಗಿರುವುದಿಲ್ಲ.

47. ಸದರಿ ಶವವನ್ನು ಕೈ ಮತ್ತು ಕಾಲು ಕಟ್ಟಿ, ಪ್ಲಾಸ್ಟಿಕ್ ಪೇಪರ್‌ನ್ನು ಬಾಯಿಗೆ ಹಾಕಿ, ಭುಜದವರೆಗೆ ಒಂದು ಗೋಣಿ ಚೀಲದಲ್ಲಿ ಹಾಕಿ ಕಟ್ಟಿದ್ದು ಇತ್ತು.

48. ಸದರಿ ಗೋಣಿ ಚೀಲದಲ್ಲಿ ಮತ್ತೆ ಒಳಗೆ ಏನೇನು ಆಗಿತ್ತು ಎಂದು ನಾನು ನೋಡಿಲ್ಲ.

49. ಸದರಿ ನನ್ನ ಮಗಳ ಶವ ಸಿಕ್ಕಾಗ ಆ ಸ್ಥಳಕ್ಕೆ 1ನೇ ಆರೋಪಿತನೂ ಸಹ ಅಲ್ಲಿಗೆ ಬಂದಿದ್ದನು ಎನ್ನುವುದು ಸರಿ.

50. ಆಗ ಅಲ್ಲಿಗೆ ಪೊಲೀಸರು ಬಂದು ಆ್ಯಂಬುಲೆನ್ಸ್ ನಲ್ಲಿ ಸದರಿ ಶವವನ್ನು ಹಾಕಿಕೊಂಡು ಬೆಂಗಳೂರಿನ ರಾಜರಾಜೇಶ್ವರಿ ಆಸ್ಪತ್ರೆಗೆ ಶವ ಪರೀಕ್ಷೆಗೆಂದು ಒಯ್ದಿರುತ್ತಾರೆ.

51. ಆ ಸಮಯದಲ್ಲಿ ನಾನು ಆಸ್ಪತ್ರೆಗೆ ಅವರ ಜೊತೆ ಹೋಗಿರಲಿಲ್ಲ.

52. ಆದರೆ, ಸದರಿ ಆಸ್ಪತ್ರೆಗೆ ನಸ್ರುಲ್ಲಾ ಮತ್ತು ಮುಯೀದ್ ಎನ್ನುವವರು ಹೋಗಿದ್ದರು.

53. ತದನಂತರದಲ್ಲಿ ನಾನು ಯಾವತ್ತೂ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ.

54. ದಿಃ03.03.2017 ರಂದು ರಾತ್ರಿ 10.00 ಗಂಟೆ ಸಮಯದಲ್ಲಿ ಸದರಿ ನನ್ನ ಮಗಳು ಆಯೀಷಾ ಇವಳ ಶವವನ್ನು ತಂದು ನಮ್ಮ ಮನೆಗೆ ಕೊಟ್ಟಿರುತ್ತಾರೆ.

55. ನಾನು ಸದರಿ ಶವವನ್ನು ಸದರಿ ಕಾಲುವೆಯಲ್ಲಿ ನೋಡಿದಾಗ ಸದರಿ ಶವದ ಮೇಲೆ ಯಾವುದೇ ಕೊಯ್ದ ರಕ್ತದ ಗಾಯ ಕಂಡುಬಂದಿರುವುದಿಲ್ಲ.

56. ಆದಿನ ಸದರಿ ಶವವನ್ನು ಶವಸಂಸ್ಕಾರ ಮಾಡಿದ ನಂತರವೂ ಸಹ ನಾನು ಯಾವತ್ತೂ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ.

57. ದಿಃ03.03.2017 ರಂದು ರಾತ್ರಿ ಕತ್ತಲಿನಲ್ಲಿ ಪೊಲೀಸರು ಸ್ಮಶಾನಕ್ಕೆ ಬಂದು ಒಂದು ದಾಖಲಾತಿಯ ಮೇಲೆ ನನ್ನ ಸಹಿಯನ್ನು ಪಡೆದುಕೊಂಡು ಹೋಗಿರುತ್ತಾರೆ.

58. ಸದರಿ ದಾಖಲಾತಿಯಲ್ಲಿ ಏನು ಬರೆದಿದ್ದರು ಎಂದು ಕತ್ತಲಿನಲ್ಲಿ ಗೊತ್ತಾಗಿರುವುದಿಲ್ಲ.

59. 4ನೇ ಆರೋಪಿತನಿಗೆ ಪಾರ್ಶ್ವವಾಯು ಆದ ಪ್ರಯುಕ್ತ ಸದರಿ ಕಾಣೆಯಾದ ಆಯೀಷಾ ಇವಳನ್ನು ನರಬಲಿ ಕೊಟ್ಟಿರುತ್ತಾರೆಂದು ಮತ್ತು ಆ ಕುರಿತು 4 ಜನ ಸಿಕ್ಕಿರುತ್ತಾರೆಂದು ಟಿವಿಯಲ್ಲಿ ಬರುತ್ತಿದ್ದ ವಿಚಾರವನ್ನು ಪೊಲೀಸರು ನಮಗೆ ತಿಳಿಸಿದ ನಂತರ ಟಿವಿಯನ್ನು ನೋಡಿದ ನಂತರ ಸದರಿ ವಿಚಾರ ನಮಗೆ ತಿಳಿದಿರುತ್ತದೆ.

60. ಸದರಿ ಆಸ್ಥಾನದ ಹತ್ತಿರವಿದ್ದ ಮನೆಗಳಲ್ಲಿ ಹೋಗಿ ನಾವು ನಮ್ಮ ಮಗಳು ಬಂದಿದ್ದಳೇ ಎಂದು ವಿಚಾರಿಸಿರುತ್ತೇವೆ, ಆದರೆ ಬಂದಿಲ್ಲ ಎಂದು ತಿಳಿಸಿದ್ದರು.

61. ಸದರಿ ಆರೋಪಿತರನ್ನು ಪೊಲೀಸರು ಠಾಣೆಗೆ ಕರೆದುಕೊಂಡು ಹೋಗಿ ಬಾಯಿ ಬಿಸಿಡಿದಾಗಲೇ ಅವರು ಒಪ್ಪಿಕೊಂಡಿರುತ್ತಾರೆಂದು ಪೊಲೀಸರು ತಿಳಿಸಿರುತ್ತಾರೆ.

62. ಪೊಲೀಸರು ಸ್ಮಶಾಸನದಲ್ಲಿ ನನ್ನ ಸಹಿಗಳನ್ನು ಪಡೆದಾದ ನಂತರ ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ.

63. ಹೊಸಹಳ್ಳಿ ಗ್ರಾಮದ ಜಮೀನಿಗೆ ಸಂಬಂಧಿಸಿದಂತೆ ನನಗೆ, ನನ್ನ ಸಹೋದರರು ಮತ್ತು ಸಹೋದರಿಯರ ನಡುಗೆ ಜಗಳವಿತ್ತು ಎನ್ನುವುದು ಸರಿಯಲ್ಲ.

64. ಖುರಾನ್ ಪ್ರಕಾರ ನರಬಲಿ ಎಂಬುದು ಇರುವುದಿಲ್ಲ ಎನ್ನುವುದು ಸರಿ.

65. ಸದರಿ ಕಾಲುವೆ ಯಾವ ಸರ್ವೆ ನಂಬರ್‌ನಲ್ಲಿ ಇರುತ್ತದೆ ಎಂಬುದು ನನಗೆ ಗೊತ್ತಿಲ್ಲ.

66. ಸದರಿ ಆಸ್ಥಾನದ ಜಮೀನಿನ ಪಶ್ಚಿಮ ದಿಕ್ಕಿನಲ್ಲಿ ಕಾಲುವೆಯನ್ನೊಳಗೊಂಡು ಒಂದು ರೀತಿಯ ಗಿಡಗೆಂಟೆಗಳಿಂದ ಕಿರುಕಾಡಿನಂತೆ ಆಗಿರುತ್ತದೆ ಎನ್ನುವುದು ಸರಿ.

67. ಸದರಿ ಕಾಲುವೆ ಇರುವ ಜಮೀನು ಯಾರಿಗೆ ಸಂಬಂಧಿಸಿದ್ದು ಎಂದು ನಾನು ವಿಚಾರಿಸಿರುವುದಿಲ್ಲ.

68. ಪೊಲೀಸರು ನಮ್ಮ ಅಂಗಡಿಯ ಬಳಿ ಬಂದು ಪಂಚನಾಮೆಯನ್ನು ಮಾಡಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

69. ಶವಪರೀಕ್ಷೆಯನ್ನು ಮುಗಿಸಿ, ಶವವನ್ನು ನಮ್ಮ ಸುಪರ್ದಿಗೆ ಕೊಟ್ಟಾಗ ಸದರಿ ಶವದ ಮೇಲೆ ಸ್ಕೂಲ್ ಯೂನಿಫಾರ್ಮ್ ಇತ್ತು.

70. ಪೊಲೀಸರು ನನ್ನ ಸಮಕ್ಷಮದಲ್ಲಿ ಯಾವುದೇ ಬಟ್ಟೆಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

71. ನನ್ನ ಮಗಳಾದ ಆಯೀಷಾ ಇವಳ ಸಾವಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎನ್ನುವುದು ಸರಿಯಲ್ಲ.

72. ಆರೋಪಿತರು ಆಯೀಷಾ ಇವಳನ್ನು ಯಾವತ್ತೂ ಅಪಹರಣ ಮಾಡಿರುವುದಿಲ್ಲ ಮತ್ತು ಅವಳನ್ನು ಆರೋಪಿತರು ಸಾಯಿಸಿರುವುದಿಲ್ಲವಾದರೂ ಸಹ ಈಗ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

73. ನಾನು ನನ್ನ ಮಗಳಾದ ಆಯೀಷಾ ಇವಳು ಕಾಣೆಯಾದ ವಿಚಾರದಲ್ಲಿ ಪಿರ್ಯಾದನ್ನು ಸಲ್ಲಿಸಿದ ಕಾರಣ ಪೊಲೀಸರಿಗೆ ಅವಳ ಸಾವಿಗೆ ಕಾರಣವನ್ನು ಕಂಡುಹಿಡಿಯಲು ಸಾಧ್ಯವಾಗದ ಕಾರಣ ಅಮಾಯಕರಾದ ಆರೋಪಿತರನ್ನು ಬಲಿಪಶು ಮಾಡಿ, ಅವರೇ ಕೊಲೆ ಮಾಡಿರುತ್ತಾರೆಂದು ನನ್ನಿಂದ ಸುಳ್ಳು ಸಾಕ್ಷಿ ನುಡಿಸುತ್ತಿದ್ದಾರೆ ಎನ್ನುವುದು ಸರಿಯಲ್ಲ.

74. ಪಾರ್ಶ್ವವಾಯು ವ್ಯಕ್ತಿಯನ್ನು ನರಬಲಿಯಿಂದ ಗುಣಪಡಿಸಲಾಗುತ್ತದೆ ಎಂಬ ಪರಿಕಲ್ಪನೆಯನ್ನು ನಾವೇ ಸೃಷ್ಟಿಸಿಕೊಂಡಿದ್ದು ಇರುತ್ತದೆ ಎನ್ನುವುದು ಸರಿಯಲ್ಲ.

75. ದಿ:01.03.2017 ರಂದು ನನ್ನ ಮಗಳು ಕಾಣೆಯಾದ ಕ್ಷಣದಿಂದ 1ನೇ ಆರೋಪಿತನು ನನ್ನೊಂದಿಗೆ ಸಾಥ್ ನೀಡಿ ಅವಳಿಗೋಸ್ಕರ ಹುಡುಕಾಟ ನಡೆಸಿರುತ್ತಾನೆ ಎನ್ನುವುದು ಸರಿಯಲ್ಲ.

76. ಪೊಲೀಸರು ಹೇಳಿಕೊಟ್ಟಂತೆ ಈಗ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.